

## ನಮ್ಮ ಸುರ್ವಣ ಆಶಯ

ಮಹಾ ಬೋಧಿ ಸೊಸೈಟಿಯು 1956 ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತರವರಿಂದ ಸ್ಥಾಪನೆಗೊಂಡು ಅವರ ಮಾರ್ಗದರ್ಶನದಲ್ಲಿ ಭಗವಾನ್ ಬುದ್ಧರು ಬೋಧಿಸಿದ ನಾಲ್ಕು ಪರಮ ಪವಿತ್ರ ಸತ್ಯಗಳನ್ನು , ಪಂಚಶೀಲಗಳನ್ನು , ಮಧ್ಯಮ ಮಾರ್ಗವನ್ನು , ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸುವುದರ ಜೊತೆಗೆ ಧಾರ್ಮಿಕ, ಶೈಕ್ಷಣಿಕ ಹಾಗು ಸಾಮಾಜೀಕ ಸೇವಾ ಕಾರ್ಯಗಳನ್ನು ನೆಡೆಸುತ್ತಾ ಬಂದಿದೆ.

2550 ನೇ ಪವಿತ್ರ ಬುದ್ಧ ಜಯಂತಿಯು ಹಾಗು ಮಹಾಬೋಧಿ ಸೊಸೈಟಿಯ ಸುವರ್ಣಜಯಂತಿ ಮತ್ತು ಸುವರ್ಣ ಕರ್ನಾಟಕ ಜಯಂತಿಗಳ ನೆನಪಿಗಾಗಿ ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆಯಲ್ಲಿ 50 ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಆಶಯ ವುಳ್ಳವರಾಗಿದ್ದೆವೆ.

ಮನುಕೂಲದ ಒಳಿತಿಗಾಗಿ ಭಗವಾನ್ ಬುದ್ಧರು ಉಪದೇಶಿಸಿದ ಸತ್ಯಗಳನ್ನು ಈ ಕಿರು ಕನ್ನಡದ ಪುಸ್ತಕಗಳಲ್ಲಿ ಸರಳ ಆಡುಭಾಷೆಯಲ್ಲಿ ಪ್ರಕಟಿಸಿ ಎಲ್ಲ ವಯೊಮಾನದವರಿಗೂ ಅರ್ಥವಾಗುವ ಪುಸ್ತಕಮಾಲಿಕೆ ಇದಾಗಲಿದೆ .

ಇಂದಿನ ಕಲುಶಿತ ಬದುಕಿನಿಂದ ನೆಮ್ಮದಿ ಕಳೆದುಕೊಂಡ ಮನಸುಗಳಿಗೆ ಸರಿ ತಪ್ಪುಗಳ ಅರಿವು ಮೂಡಿಸಿ ಸುಖ, ಶಾಂತಿ ಮತ್ತು ಜ್ಞಾನದ ದಾರಿದೀಪವಾಗಿ ಈ ಮಾಲಿಕೆ ಜನರ ಮನದಲ್ಲಿ ಸುವರ್ಣ ಬೆಳಕು ಚೆಲ್ಲಲಿ ಎನ್ನುವುದೆ ನಮ್ಮ ಆಶಯ.

Maha Bodhi Society,
14, Kalidasa Road,Gandhinagar, Bangalore - 560 009, India.
Tel: 080-22250684, Fax: 080-22264438, email: info@mahabodhi.info, www.mahabodhi.info

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 13



# ಬುದ್ಧ ಮತ್ತು ಧಮ್ಮದ ಪವಿತ್ರ ಗುಣಗಳು

ಪೂಜ್ಯ ಡಾ|| ಕೆ. ಶ್ರೀ ಧಮ್ಮಾನಂದ

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ–13

# ಬುದ್ಧ ಮತ್ತು ಧಮ್ಮದ ಪವಿತ್ರ ಗುಣಗಳು

**ಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ**

**ಅನುವಾದ : ಅನೀಶ್ ಬೋಧ್**

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
ಗಾಂಧಿನಗರ, ಬೆಂಗಳೂರು–560 009

**The Great virtues of Buddha and Dhamma**
Written by
**Venerable Dr. K. Sri Dhammananda** and
translated into Kannada by **Anish Bodh**

**ಮೊದಲ ಕನ್ನಡ ಆವೃತ್ತಿ – 2008 – 6000 ಪ್ರತಿಗಳು**

ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–22264438
E-mail : info@mahabodhi.info

ಮುಖಪುಟ ವಿನ್ಯಾಸ : **ಶ್ರೀ ಸಿ. ಚಂದ್ರಶೇಖರ**

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ನಂ. 39, 7ನೇ ಅಡ್ಡರಸ್ತೆ, ಸರಸ್ವತಿಪುರ
ನಂದಿನಿ ಲೇಔಟ್, ಬೆಂಗಳೂರು–96
ದೂ : 23498198, ಮೊ : 9916461691

## The Gift of Dhamma Excels All Gifts

The printing of this Dhamma book for free distribution is sponsored by

- Sister Teoh Sor Hui and family members in memory of her parents, Mr. Teoh Kah Hock and Mdm. Khor Siew Hong
- The collective donation from devotees of the Subang Jaya Buddhist Association (Malaysia) Pattidana Ceremony (in conjunction with Qing Ming) held on 23rd March 2008.



**In memory of Mr. Teoh Kah Hock**



**In memory of Mdm. Khor Siew Hong**

**DEDICATION OF MERITS**

May the merits accruing from this Dhamma Dana be to the well-being and happiness of all donors, departed ones and all beings.

May all beings share in the merits gained culminating in the attainment of Nibbna, the cessation of all suffering.

***Sadhu, Sadhu, Sadhu***

# ಮೊದಲ ಮಾತು

**ಸಬ್ಬದಾನಂ ಧಮ್ಮ ದಾನಂ ಜಿನಾತಿ ।**
**ಸಬ್ಬರಸಂ ಧಮ್ಮ ರಸಂ ಜಿನಾತಿ**



**ಪೂಜ್ಯ ಆಚಾರ್ಯ ಬುದ್ಧರಕ್ಖಿತ ಭಂತೇಜಿ**

ಭಗವಾನ್ ಬುದ್ಧರು ಉಪದೇಶಿಸಿದ ಧಮ್ಮಪದದ ಮಾತು ಇದು. ಎಲ್ಲಾ ದಾನಕ್ಕಿಂತ ಧಮ್ಮ ದಾನವು ಶ್ರೇಷ್ಠ, ಎಲ್ಲಾ ರಸಸ್ವಾದಕ್ಕಿಂತ ಧಮ್ಮ ರಸಸ್ವಾದ ಪರಮಾನಂದದಾಯಕವಾದದ್ದು.

ಹೌದು, ಸತ್ಯವಾಕ್ಯ ಇದು. ನಮ್ಮ ಇಡೀ ಬದುಕನ್ನು, ನಾವು ಜೀವಿಸುವುದು ಆನಂದದಿಂದ ಬಾಳುವುದಕ್ಕೆ. ಅದಕ್ಕೆ ಮೂಲ ಬದುಕಿನಲ್ಲಿ ಶೀಲ–ಸನ್ನಡತೆ, ಸದಾಚಾರ, ಶೀಲವಿದ್ದರೆ, ಸಮಾಧಾನ ಮತ್ತು ಸಂತೋಷ ತಾನಾಗಿಯೇ ಒದಗಿ ಬರುತ್ತವೆ.

ಕ್ರಿಸ್ತಪೂರ್ವ 3ನೇ ಶತಮಾನದಲ್ಲಿ ಬೌದ್ಧ ಮಹಾಸಾಮ್ರಾಟ ಅಶೋಕ, ನೆಮ್ಮದಿಯನ್ನು ಪಡೆದಿದ್ದು, ಆನಂದವನ್ನು ಹಂಚಿದ್ದ ಈ ಬೌದ್ಧ ಸರಣಗಳನ್ನು ಶೀಲಗಳನ್ನು ಪಾಲಿಸಿದ ಮೇಲೆಯೇ. ಆತನಂತಹ ಮಹಾದಾನಿ ಬೇರೆ ಯಾರೂ ಇಲ್ಲ. ಬುದ್ಧ ಧಮ್ಮದ ದೀಪವನ್ನು ಬಹುಜನ ಸುಖಾಯ, ಬಹುಜನ ಹಿತಾಯ, ವಿಶ್ವದ ಎಲ್ಲಕಡೆಯೂ ಹಚ್ಚಲಿಕ್ಕಾಗಿ ಆತ ತನ್ನ ಮಕ್ಕಳಾದ ಮಹಿಂದ ಮತ್ತು ಸಂಘಮಿತ್ರರನ್ನು ಸಂಘಕ್ಕೆ ದಾನ ಮಾಡಿದ. ಹಾಗೆಯೇ ಭಾರತದ ಉದ್ದಗಲಕ್ಕೂ 84,000 ಸ್ತೂಪಗಳನ್ನು ಕಟ್ಟಿಸಿದ. ಮಹಿಷ ಮಂಡಲ – ಈ ನಮ್ಮ ಕರ್ನಾಟಕಕ್ಕೂ ಪೂಜ್ಯ ಯೋನ ರಕ್ಖಿತ



ಎನ್ನುವ ಭಿಕ್ಖುವನ್ನು ಕಳುಹಿಸಿದ್ದ. ಭಾರತದಲ್ಲಿ ಬೆಳಗಿದ ಈ ಬುದ್ಧ ಬೆಳಕು, ಇಡೀ ವಿಶ್ವಕ್ಕೆ ಬೆಳಕಾಗಿ ವಿಶ್ವಜ್ಯೋತಿಯಾಯಿತು. ಶಾಂತಿಯ ತಂಪನ್ನರೆಯಿತು.

ಅದೇ ಕೆಲಸವನ್ನು ಮುಂದುವರೆಸಿ 1956ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತ ಭಂತೇಜಿಯವರು ಬೆಂಗಳೂರಿನಲ್ಲಿ ಮಹಾಬೋಧಿ ಸಂಸ್ಥೆ ಕಟ್ಟಿದರು. ಬುದ್ಧಜ್ಞಾನ ದೀಪವನ್ನು ಹಿಡಿದು–ಐವತ್ತು ವರ್ಷ ಕರ್ನಾಟಕದಲ್ಲಿ ಅಡ್ಡಾಡಿದರು. ಈಗ ಈ ಸಂಸ್ಥೆಗೆ – ಆ ಬಹುಜನ ಸೇವೆಗೆ – ಸುವರ್ಣ ಜಯಂತಿ ಉತ್ಸವ. ಇಂತಹ ಚಿನ್ನದ ಹಬ್ಬದ ಸಂದರ್ಭದಲ್ಲಿ ಕರ್ನಾಟಕದ ಮನೆಮನೆಗೆ, ಕನ್ನಡದ ಮನಕ್ಕೆ ಒಂದೊಂದು ಬುದ್ಧ ವಚನದ ಸಂದೇಶದ ಹಣತೆಗಳನ್ನು, ಕೈಪಿಡಿಗಳನ್ನು ನೀಡಬೇಕೆಂದು ನಮ್ಮ ಭಂತೇಜಿಯವರ ಅಪೇಕ್ಷೆ. ಈ 50ರ ಹಬ್ಬದಲ್ಲಿ ಸುವರ್ಣ ಜಯಂತಿ ನೆನಪಿಗಾಗಿ – 50 ಕನ್ನಡ ಕೈಪಿಡಿಗಳನ್ನು ಪ್ರಕಟಿಸಿ, ಬುದ್ಧ ನೀಡಿದ ಉಪದೇಶವಾಣಿಯನ್ನು ಮನೆಗೆ – ಮನಕ್ಕೆ ಮುಟ್ಟಿಸುವ ಕಾರ್ಯದ ಕೃತಿ ಇದು.

ದಯಮಾಡಿ, ಸ್ವೀಕರಿಸಿ, ಭಗವಾನ್ ಬುದ್ಧರ ಮಹಾಕರುಣೆಯು, ನಿಮಗೆ ಸುಖ–ಶಾಂತಿ ಸಮೃದ್ಧಿಯನ್ನು ಹರಸಲಿ ಎಂದು ಹಾರೈಸುತ್ತೇವೆ.

*ಶುಭಾಶಯಗಳೊಡನೆ*

**ಪೂಜ್ಯ ಭಂತೇಜಿಗಳು, ಉಪಾಸಕ/ಉಪಾಸಕಿಯರು**
**ಮಹಾಬೋಧಿ ಸಂಸ್ಥೆಗಳು**

# ಪರಮಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ ನಾಯಕ ಮಹಾಥೇರ



"ಯಾರ ಆಕಾಂಕ್ಷೆಗಳು, ಸದಾ ಉದಾತ್ತವಾಗಿರುತ್ತದೋ, ಯಾರು ಪರರ ಜೀವನಗಳನ್ನು ಸಾರಯುತವನ್ನಾಗಿ ಮಾಡಿರುವರೋ, ಯಾರು ಪರರ ಜೀವನಗಳಲ್ಲಿ ಶಾಂತಿಯನ್ನು ತರುವವರಾಗಿದ್ದಾರೋ, ಯಾರು ಈ ಜಗವನ್ನು ಜೀವಿಸಲು ಉತ್ತಮವನ್ನಾಗಿ ಮಾಡಿರುವವರೋ ಯಾರ ಎಲ್ಲಾ ಕಾರ್ಯಗಳು ಸದಾ ಮೈತ್ರಿಯಿಂದ ಕೂಡಿರುವುದೋ ಮತ್ತು ಯಾರು ಸದಾ ಮುದಿತಾದಲ್ಲೆ ಆನಂದಿಸುವರೋ ಅಂತಹವರು ಸದಾ ಆನಂದವಾಗಿ ಸುಖವಾಗಿ ಇರುತ್ತಾರೆ".

ಇದಕ್ಕೆ ಉದಾಹರಣೆ ಎನಿಸಿದಂತಹ ಈ ಮಹಾ ಪುರುಷರೇ ಡಾ॥ ಕೆ. ಶ್ರೀ ಧಮ್ಮಾನಂದರವರು. ಶ್ರೀಯುತರು 18ನೇ ಮಾರ್ಚಿ 1919ರಲ್ಲಿ ಶ್ರೀಲಂಕದ ಕಿರಿಂದೆ ಎಂಬ ಹಳ್ಳಿಯಲ್ಲಿ ಜನಿಸಿದರು. ಬಾಲ್ಯದಿಂದಲೇ ಬೌದ್ಧಾಸಕ್ತಿ ಹೊಂದಿದ್ದು 12ನೇ ವಯಸ್ಸಿಗೆ ಪೂಜ್ಯ ಕೆ. ಧಮ್ಮರತನ ಮಹಾಥೇರ ಅವರಿಂದ ಸಾಮಣೇರ ದೀಕ್ಷೆ ಪಡೆದರು. 22ನೇ ವಯಸ್ಸಿಗೆ ಉಪಸಂಪದ ಪಡೆದರು. ಇವರು ಶ್ರೀಲಂಕದ ಹಿರಿಯ ಅನೇಕ ನಾಯಕ ಥೇರರಿಂದ ಶಿಕ್ಷಣ ಪಡೆದು, 26ನೇ ವಯಸ್ಸಿಗೆ ಪಾಲಿ ತಿಪಿಟಕದಲ್ಲಿ ಡಿಪ್ಲೊಮಾ ಪಡೆದರು. 1945ರಲ್ಲಿ ಬನಾರಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. 1949ರಲ್ಲಿ ಎಂ.ಎ. ಪಡೆದರು. ಭಾರತದ ರಾಷ್ಟ್ರಪತಿಯಾಗಿದ್ದ ರಾಧಾಕೃಷ್ಣನ್‌ರವರ ಆಶ್ರಯದಲ್ಲಿ ಸಂಸ್ಕೃತ, ಹಿಂದಿ ಮತ್ತು ಭಾರತದ ತತ್ವಶಾಸ್ತ್ರದಲ್ಲಿ ಅಧ್ಯಯನ ನಡೆಸಿದರು. 'ಶಾಸ್ತ್ರೀಯ' ಪದವಿ ಪಡೆದರು.

ನಂತರ ಬೌದ್ಧ ಧಮ್ಮದ ಉನ್ನತಿಗೆ ನಿರಂತರ ಶ್ರಮಿಸಿದರು. ಹಲವಾರು ಸಂಸ್ಥೆಗಳನ್ನು ಕಟ್ಟಿದರು. ಹಲವಾರು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಾಕಾರರು ಆದರು. ಬಹಳಷ್ಟು ಗ್ರಂಥಗಳನ್ನು ಬರೆದರು.



ಬೌದ್ಧ ಜಗತ್ತಿಗೆ ನಾಯಕರಂತೆ ಬೆಳಗಿದರು. ಅವರು ಅನೇಕ ಪದವಿ ಪಾರಿತೋಷಕಗಳನ್ನು ಪಡೆದರು. ಉದಾಹರಣೆಗೆ ಶಾಸ್ತ್ರೀಯ, ಧಮ್ಮಕೀರ್ತಿ, ಶ್ರೀ ಸದ್ಧಮ್ಮ ವಿಶಾರದ, ಪರಿಯತ್ತಿ ವಿಶಾರದ, ತಿಪಿಟಕಾ, ವಗಿಸ್ವರಚಾರ್ಯ ಮಹೋಪಾಧ್ಯಾಯ, ಬುದ್ಧಶಾಸನ ವಿಭೂಷಣ, ದರ್ಶನ ವಿಶಾರದ, ಸಾಹಿತ್ಯ ಚಕ್ರವರ್ತಿ, ಸಧಮ್ಮ ಪ್ರವತ್ರಿಕಾ ಚಕ್ರವರ್ತಿ, ಪಿ.ಹೆಚ್.ಡಿ.ಗಳು ಇತ್ಯಾದಿ ಪದವಿಗಳನ್ನು ಬಿರುದುಗಳನ್ನು ದೇಶ ವಿದೇಶಗಳಲ್ಲಿ ಪಡೆದರು.

ಶ್ರಿಯುತ ಧಮ್ಮಾನಂದರವರು ಆಧುನಿಕ ಬೌದ್ಧ ಜಗತ್ತಿನಲ್ಲಿ ನಾಯಕರಂತೆ ವಿಜೃಂಭಿಸಿದರು. ಅವರು ಶಾಸನ ಅಭಿವೃದ್ಧಿ ವರ್ಧನಾ ಸೊಸೈಟಿ, ಮಲೇಶಿಯಾದ ಯುವ ಬೌದ್ಧ ಮಂಡಲಿ, ಮಾನವತಾ ತತ್ವ ಸ್ನೇಹ ಗುಂಪಿಗೆ, ವಿದ್ಯಾವರ್ಧನಾ ಪಿರಿವೇಣ ಶ್ರೀಲಂಕಗೆ ಆಶ್ರಯದಾತರಾಗಿದ್ದಾರೆ. ಮಲೇಶಿಯಾದ ಬುದ್ಧಿಷ್ಟ್ ಮಿಷನರಿ ಸೊಸೈಟಿಯ ಧಾರ್ಮಿಕ ನಿರ್ದೆಶಕರು, ಸ್ಥಾಪಕರು ಮತ್ತು ಪ್ರಧಾನ ಸಲಹಾಕಾರರು ಆಗಿದ್ದರು. ಅವರು 50ಕ್ಕೂ ಹೆಚ್ಚು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಕಾರ ಆಗಿದ್ದರು. ಮಲೇಶಿಯಾ, ಸಿಂಗಪೂರ, ಶ್ರೀಲಂಕದ ಸಂಘ ಕೌನ್ಸೆಲ್‌ಗೆ ಅಧ್ಯಕ್ಷರಾಗಿದ್ದರು. ಹಾಗು ಹಲವಾರು ದೇಶ ವಿದೇಶ ಸಂಸ್ಥೆಗಳಿಗೆ ನಿರ್ದೇಶಕರು, ಛೇರ್‌ಮನ್, ಸಲಹಾಕಾರರು ಆಗಿದ್ದರು.

ಎಲ್ಲಕ್ಕಿಂತ ಹೆಚ್ಚಾಗಿ ಅವರು ಅದ್ವಿತೀಯ ಲೇಖಕರಾಗಿದ್ದರು. ಸ್ವತಂತ್ರ ಶೈಲಿಯಲ್ಲಿ ಅವರು ಬೌದ್ಧ ದರ್ಶನಗಳನ್ನು ಬರೆದರು. ದೇಶ ವಿದೇಶಗಳಲ್ಲಿ ಧಮ್ಮವನ್ನು ಹರಡಿದರು. ಬೌದ್ಧ ಧಮ್ಮಕ್ಕಿರುವ ಮಿಥ್ಯಾ ಅಪವಾದಗಳನ್ನು ದೂರಿಕರಿಸಿದರು. ಅಲ್ಪ ಕಾಲದಲ್ಲೇ ಅವರು ಶ್ರೀಲಂಕ, ಬರ್ಮ, ಸಿಂಗಪೂರ, ಮಲೇಶಿಯಾ, ಥೈಲ್ಯಾಂಡ್, ಥೈವಾನ್, ಜಪಾನ್, ನ್ಯೂಜಿಲ್ಯಾಂಡ್, ಇಂಗ್ಲೆಂಡ್, ಅಮೇರಿಕಾದಲ್ಲೂ ಅವರು ಜನಪ್ರಿಯತೆ ಪಡೆದರು.

ಪೂಜ್ಯ ಶ್ರೀ ಧಮ್ಮಾನಂದ ಥೇರರು 31ನೇ ಆಗಸ್ಟ್ 2006ರಂದು ಇಹಲೋಕ ತ್ಯಜಿಸಿದರು.

# ಬುದ್ಧರ ಪವಿತ್ರ ಗುಣಗಳು

ಬುದ್ಧರ ಭಗವಾನರು ಸರ್ವ ಪವಿತ್ರ ಸದ್ಗುಣಗಳ ಸಾಕಾರಮೂರ್ತಿ ಆಗಿದ್ದಾರೆ. ಅವರು ಪರಮೋನ್ನತ ಶೀಲದ (ಸದಾಚಾರ) ಸಾಕಾರಮೂರ್ತಿಯಾಗಿದ್ದರು. ಆಳವಾದ ಸಮಾಧಿಗಳ ತುತ್ತತುದಿಯನ್ನು ತಲುಪಿದ್ದರು ಮತ್ತು ಮಹೋನ್ನತ ತೀಕ್ಷ್ಣವಾದ ಪ್ರಜ್ಞಾಶೀಲತೆಯನ್ನು ಹೊಂದಿದ್ದರು. ಈ ಎಲ್ಲಾ ಗುಣಗಳು ಮಾನವನ ಇತಿಹಾಸದಲ್ಲೆ ಅಸಾಮಾನ್ಯವಾಗಿದ್ದು ಯಾರು ಮುಟ್ಟಲಾರದಂತಹುದು ಆಗಿವೆ. ಈ ಎಲ್ಲಾ ಸದ್ಗುಣಗಳು ಪವಿತ್ರ ಗ್ರಂಥಗಳಾದ ತಿಪಿಟಕದಲ್ಲಿ ವಿವರಿಸಲಾಗಿದೆ.

ಜಗತ್ತಿನಾದ್ಯಂತ ಬೌದ್ಧರು ಈ ಶ್ರೇಷ್ಠವಾದ, ಉದಾತ್ತವಾದ 9 ಸದ್ಗುಣಗಳನ್ನು ಪ್ರತಿದಿನ ಪಠಿಸುತ್ತಾರೆ ಮತ್ತು ಚಿಂತಿಸುತ್ತಾರೆ. ಬುದ್ಧರಲ್ಲಿ ಈ 9ಕ್ಕಿಂತ ಇನ್ನೂ ಹಲವಾರು ಉದಾತ್ತವಾದ ಸದ್ಗುಣಗಳನ್ನು ಹೊಂದಿದ್ದರೂ ಈ ಸೂತ್ರದಲ್ಲಿ 9ನ್ನು ಮಾತ್ರ ವರ್ಣಿಸಲಾಗಿದೆ. ಇನ್ನಿತರ ಶಾಖೆಗಳ ಬೌದ್ಧರು ಸಹಾ ಈ ಗುಣಗಳನ್ನು ಅನೇಕ ಬುದ್ಧರಿಗೆ ವರ್ಣಿಸುತ್ತಾರೆ. ಅವರು ಯಾವ ರೀತಿಯಲ್ಲಿ, ಹೇಗೆಯೆ ಬುದ್ಧರನ್ನು ಪರಿಚಯಿಸಿದ್ದರೂ ಆ ಎಲ್ಲಾ ಬುದ್ಧರು ಜಗತ್ತಿಗೆ ಬಂದು ಹೋಗಿದ್ದು ಚಾರಿತ್ರಿಕವಾಗಿದೆ. ಕಾಲಕಾಲಕ್ಕೆ ಅದೇ ಮಹೋನ್ನತ ಸದ್ಗುಣಗಳಿಂದ ಮತ್ತು ಅದೇ ಸಂಬೋಧಿಯಿಂದ ಕೂಡಿ ಜನರನ್ನು ಸ್ಫೂರ್ತಿಯುಂಟು ಮಾಡಲು ಬರುತ್ತಾರೆ. ಆದ್ದರಿಂದ ಪ್ರತಿ ಬುದ್ಧರಿಗೆ ಪ್ರತ್ಯೇಕವಾಗಿ ವಂದಿಸಬೇಕಾಗಿಲ್ಲ. ಒಮ್ಮೆ ಬುದ್ಧರಾಗಿಬಿಟ್ಟರೆ ಅದರಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಹೆಚ್ಚು ಎಂಬ ಪ್ರಶ್ನೆಯೇ ಇರುವುದಿಲ್ಲ.



ಈ ಕೆಳಗೆ ಬರೆದಿರುವ ಪಾಳಿಯ ಗಾಥೆಯು ಬುದ್ಧರ ಒಂಭತ್ತು ಸದ್ಗುಣಗಳನ್ನು ಒಳಗೊಂಡಿದೆ. ಅದನ್ನು ಶ್ರದ್ಧಾವಂತ ಬೌದ್ಧರು ಬುದ್ಧರಿಗೆ ನಮಿಸುತ್ತಾ ಪಠಿಸುತ್ತಾರೆ.

**"ಇತಿ ಪಿ ಸೋ ಭಗವಾ ಅರಹಂ ಸಮ್ಮಾಸಂಬುದ್ಧೋ**
**ವಿಜ್ಜಾಚರಣ ಸಂಪನ್ನೊ, ಸುಗತೋ, ಲೋಕವಿದೂ**
**ಅನುತ್ತರೊ ಪುರಿಸ-ದಮ್ಮಸಾರಥಿ, ಸತ್ತಾ ದೇವ**
**ಮನುಸ್ಸಾನಾಂ, ಬುದ್ಧೋ, ಭಗವಾತಿ".**

ಈ ಗಾಥೆಯ ಸತ್ಯತೆಯು ಪ್ರಶ್ನಾತೀತವಾಗಿದೆ. ಏಕೆಂದರೆ ಇದು ತಿಪಿಟಕದಲ್ಲಿನ ಪ್ರಮುಖ ಅಧ್ಯಾಯಗಳಿಂದ ಬಂದಿದೆ ಮತ್ತು ಬೌದ್ಧ ಸಾಹಿತ್ಯದ ಮೇರು ಕೃತಿಗಳಲ್ಲಿ ಒಂದಾದ ವಿಶುದ್ಧಿ ಮಾರ್ಗದ ಅಥವಾ ಅರಹಂತ ಉಪತಿಸ್ಸರವರ ವಿಮುಕ್ತಿ ಮಾರ್ಗದ 40 ಸಮಥಾ ಭಾವನೆ ಧ್ಯಾನಗಳಲ್ಲಿ ಒಂದಾಗಿದೆ. ಅದೇ ಬುದ್ಧಾನುಸತಿ, ಅಂದರೆ ಬುದ್ಧರ ಸದ್ಗುಣಗಳ ಬಗ್ಗೆ ಧ್ಯಾನ.

ಈ ಪಾಳಿ ಗಾಥೆಯ ಸಂಕ್ಷಿಪ್ತ ಅನುವಾದ ಹೀಗಿದೆ. "ನಿಜಕ್ಕೂ ಭಗವಾನರು ಶ್ರೇಷ್ಠ ಅರಹಂತರೂ, ಅಗಿದ್ದಾರೆ. ಪರಿಪೂರ್ಣತೆಯನ್ನು ಪಡೆದವರು ಮತ್ತು ಪೂಜಿಸಲು, ಶರಣಾಗತರಾಗಲು ಅರ್ಹರಾಗಿದ್ದಾರೆ. ಸಮ್ಮಾಸಂಬುದ್ಧೋ-ಸರ್ವಜ್ಞತೆಯನ್ನು ಹೊಂದಿರುವವರು ಆಗಿದ್ದಾರೆ. ವಿಜ್ಜಾಚರಣ ಸಂಪನ್ನೊ-ಸ್ಪಷ್ಟವಾದ ದರ್ಶನವನ್ನು ಮತ್ತು ಸುಚಾರಿತ್ರ್ಯವನ್ನು ಹೊಂದಿದ ಸಾಕಾರಮೂರ್ತಿಯಾಗಿದ್ದಾರೆ. ಸುಗತೋ-ಸುಮಾರ್ಗದಲ್ಲಿ ನಡೆದವರು, ಸುವಚನವನ್ನು ನುಡಿದವರಾಗಿದ್ದಾರೆ. ಲೋಕವಿದು-ಸರ್ವಲೋಕಗಳನ್ನು ಬಲ್ಲವರು ಆಗಿದ್ದಾರೆ. ಅನುತ್ತರೊ ಪುರಿಸ ಧಮ್ಮ ಸಾರಥಿ-ದಮಿಸಲಾಗದವರನ್ನು ಸಹಾ ದಮಿಸುವ ಅನುತ್ತರವಾದ

ನಾಯಕರು, ಸತ್ತಾ–ದೇವ ಮನುಸ್ಸಾನಾಂ–ದೇವತೆಗಳಿಗೆ ಮತ್ತು ಮಾನವರಿಗೆ ಮಹೋನ್ನತ ಗುರುಗಳಾಗಿದ್ದಾರೆ. ಬುದ್ಧೋ–ಜ್ಞಾನೋದಯವನ್ನು ಪಡೆದು ಪರರಿಗೆ ಸಂಬೋಧಿಯ ಹಾದಿಯನ್ನು ತೋರಿಸುವವರು ಮತ್ತು ಭಗವಾ– ಮಂಗಳವನ್ನುಂಟು (ಶುಭ) ಮಾಡುವವರಾಗಿದ್ದಾರೆ.

**1. ಅರಹಂ :**

ಬುದ್ಧರು ಅರಹಂತರೆಂದು ಐದು ರೀತಿಯಲ್ಲಿ ವರ್ಣಿಸುತ್ತಾರೆ.

– ಅವರು ಎಲ್ಲಾ ರೀತಿಯ ಕ್ಲೇಶಗಳನ್ನು ತೊಡೆದುಹಾಕಿದ್ದಾರೆ.

– ಅವರು ಎಲ್ಲಾ ರೀತಿಯ ಅರಿಗಳನ್ನು (ಶತ್ರುಗಳನ್ನು) ದಮಿಸಿದ್ದಾರೆ. ಅಂದರೆ ಕ್ಲೇಶಗಳಿಗೆ ಸಂಬಂಧಿಸಿದ ಎಲ್ಲವನ್ನು ಅಂತ್ಯಗೊಳಿಸಿದ್ದಾರೆ.

– ಅವರು ಅಸ್ತಿತ್ವದ ಚಕ್ರದ ಅರಗಳನ್ನು ಧ್ವಂಸ ಮಾಡಿದ್ದಾರೆ.

– ಅವರು ಪೂಜೆಗೆ ಮತ್ತು ಶರಣಾಗತಿಗೆ ಅರ್ಹರಾಗಿದ್ದಾರೆ.

– ಅವರು ತನ್ನ ವ್ಯಕ್ತಿತ್ವದಲ್ಲಿಯಾಗಲಿ ಅಥವಾ ಬೋಧನೆಯಲ್ಲಾಗಲಿ ಯಾವ ರಹಸ್ಯವನ್ನು ಹೊಂದಿಲ್ಲ.

ಬುದ್ಧ ಭಗವಾನರು ಮಾನವ ಇತಿಹಾಸದಲ್ಲೇ ಪರಮಶ್ರೇಷ್ಠರಾಗಿದ್ದಾರೆ ಅವರು ತಮ್ಮ ಪರಿಪೂರ್ಣ ಜೀವನದೊಂದಿಗೆ ಕಳಂಕರಹಿತರಾಗಿದ್ದಾರೆ ಹಾಗು ಕಲೆರಹಿತರಾಗಿದ್ದಾರೆ. ಅವರು ಬೋಧಿಯ ಬುಡದಲ್ಲಿದ್ದಾಗ ಎಲ್ಲಾ ರೀತಿಯ ಪಾಪಗಳನ್ನು ಜಯಿಸಿದ್ದಾರೆ ಮತ್ತು ಪವಿತ್ರತೆ ಪರಮೋಚ್ಚ ಪದವಿಯನ್ನು ಪ್ರಾಪ್ತಿ ಗಳಿಸಿದರು. ಅವರು ದುಃಖವೆಲ್ಲದರಿಂದ ಮುಕ್ತರಾಗಿ, ನಿಬ್ಬಾಣವನ್ನು ಪ್ರಾಪ್ತಿ ಮಾಡಿದರು. ಅವರು ಜಾಗತಿಕ ಗೌರವಾರ್ಹರು ಮತ್ತು ಸರ್ವರೀತಿಯಲ್ಲಿಯೂ ಅವರು ಗೌರವಕ್ಕೆ ಅರ್ಹರಾಗಿದ್ದಾರೆ. ಅವರ ಬೋಧನೆಯಲ್ಲಿ ಯಾವ ರಹಸ್ಯಗಳಿಲ್ಲ ಮತ್ತು ಯಾವುದೇ ನಿಗೂಢತೆಗಳಿಲ್ಲ. ಅವರು ತೆರೆದ ಪುಸ್ತಕದಂತೆ, ಎಲ್ಲರೂ ಬಂದು ನೋಡಬಹುದು.



**2. ಸಮ್ಮಾ ಸಂಬುದ್ಧೋ :** ಬುದ್ಧರನ್ನು ಸಮ್ಮಾ ಸಂಬುದ್ಧರೆಂದು ಸೂಚಿಸಲಾಗಿದೆ. ಏಕೆಂದರೆ ಅವರು ಲೋಕದ ಅಸ್ತಿತ್ವವನ್ನು ಯಥಾಭೂತ ರೀತಿಯಲ್ಲಿ ಅರಿತಿದ್ದಾರೆ. ಅವರು ತಮ್ಮ ಪ್ರಜ್ಞಾಶೀಲತೆಯಿಂದ ನಾಲ್ಕು ಆರ್ಯ ಸತ್ಯಗಳನ್ನು ಸಂಶೋಧಿಸಿದ್ದಾರೆ. ರಾಜಕುಮಾರನಾಗಿ ಜನಿಸಿದ್ದರೂ ಪ್ರಾಪಂಚಿಕತೆಯಿಂದ ಅಭಿನಿಷ್ಕ್ರಮಣಗೊಂಡು, ಸಮ್ಮ ಸಂಬೋಧಿಗಾಗಿ 6 ವರ್ಷಗಳ ಕಾಲ ನಿರಂತರ ಪರಿಶ್ರಮಪಟ್ಟರು. ಆ ಅವಧಿಯಲ್ಲಿ ಅವರು ಆ ಕಾಲದಲ್ಲಿದ್ದ ಗುರುಗಳನ್ನು ಮತ್ತು ಆ ಕಾಲದ ವಿಧಾನಗಳೆಲ್ಲವನ್ನು ಪ್ರಯತ್ನಿಸಿದರು. ಅವರು ತಮ್ಮ ಗುರುಗಳು ಕಲಿಸಿದ್ದನ್ನು ಕಲಿತು ತಮ್ಮ ಗುರುಗಳ ಸಮಾನ ಸ್ಥಿತಿಗೆ ಅತ್ಯಲ್ಪ ಕಾಲದಲ್ಲಿ ಸಾಧಿಸಿದರು. ಆದರೂ ಸಹ ಅವರಿಗೆ ತಮಗೆ ಸಂಬೋಧಿಯಾಗಲೀ ಅಥವಾ ನಿಬ್ಬಾಣವಾಗಲಿ ಸಿಕ್ಕಿದೆ ಎಂದು ಅನಿಸಿಲ್ಲ. ನಂತರ ಕೊನೆಗೆ ಅವರು ತಮ್ಮ ವಿಚಾರಪೂರಿತವಾದ ವಿಶ್ಲೇಷಣ ಸಾಮರ್ಥ್ಯದಿಂದ ಸ್ವ–ಸಂಶೋಧನೆ ಮಾಡಿದರು. ಮತ್ತು ಮಧ್ಯಮ ಮಾರ್ಗವನ್ನು ಕಂಡುಹಿಡಿದರು. ಹೀಗಾಗಿ ಅವರು ಸಂಪ್ರದಾಯದ ಮಾರ್ಗದಿಂದ ಬೇರೆಯಾದರೂ ಆ ಕಾಲದ ಧಾರ್ಮಿಕ ವಿಧಿ ಮತ್ತು ಸಂಸ್ಕಾರಗಳನ್ನು ತಿರಸ್ಕರಿಸಿದರು. ಅವರು ದುಃಖಗಳ, ನಿರಾಶೆಗಳ, ಸಂಘರ್ಷಗಳ ಸಾರ್ವತಿಕ ಸಮಸ್ಯೆಗಳಿಗೆ ಅಂತಿಮ ಪರಿಹಾರವನ್ನು ಕಂಡುಹಿಡಿದರು.

ಅವರು ಅವಲಂಬನೆಯಿಂದ ಉದಯಿಸುವ (ಪಟಿಚ್ಚ ಸಮುಪ್ಪಾದ) ನಿಯಮಗಳನ್ನು ಸಂಬೋಧಿಸಿದರು. ಅವರು ಜಗತ್ತಿನ ವಾಸ್ತವಿಕತೆಯ ದೃಢ ಪ್ರತಿಪಾದಕರಾದರು. ಹೀಗಾಗಿ ಅವರು ಸಮ್ಮಾಸಂ ಬುದ್ಧರಾದರು.

**3. ವಿಜ್ಜಾ–ಚರಣ ಸಂಪನ್ನೊ :** ಈ ಪದದ ಅರ್ಥವೇನೆಂದರೆ ಬುದ್ಧರು ಪರಿಪೂರ್ಣ ಸ್ಪಷ್ಟದರ್ಶನದ ವಿದ್ಯೆಯನ್ನು ಮತ್ತು ಉಪಮಾತೀತವಾದ ಸುಚಾರಿತ್ರ್ಯವನ್ನು ಹೊಂದಿದ್ದರು ಎಂದು ಸೂಚಿಸುತ್ತದೆ. ಇದು 2 ರೀತಿಯ

ಗಮನಾರ್ಹ ವಿಷಯಾಂಶವನ್ನು ಹೊಂದಿದೆ. ಅಂದರೆ ತ್ರಿವಿಧದ ಪ್ರಜ್ಞಾವನ್ನು ಮತ್ತು ಅಷ್ಠಾಂಗದ ಅಭಿಜ್ಞಾವನ್ನು ಹೊಂದಿದೆ.

ತ್ರಿವಿಧದ ಪ್ರಜ್ಞಾವು ಹೀಗಿದೆ :

- ☛ ಮೊದಲಿಗೆ ಬುದ್ಧರು ತಮ್ಮ ಹಿಂದಿನ ಜನ್ಮಗಳನ್ನೆಲ್ಲಾ ಹಾಗೆಯೇ ಪರರ ಜನ್ಮಗಳನ್ನೆಲ್ಲವನ್ನೂ ಪೂರ್ಣವಾಗಿ ಸ್ಮರಿಸಿಕೊಂಡರು.
- ☛ ಎರಡನೆಯದಾಗಿ ಜೀವಿಯ ಹಿಂದಿನದನ್ನು ನೋಡುವುದಷ್ಟೇ ಅಲ್ಲದೆ, ಜೀವಿಯ ಭವಿಷ್ಯವನ್ನು ನೋಡುವ ಅದ್ವಿತೀಯ ದೂರದೃಷ್ಟಿಯನ್ನು ಹೊಂದಿದ್ದರು ಮತ್ತು ಇಡೀ ಬ್ರಹ್ಮಾಂಡವನ್ನು ಕ್ಷಣದಲ್ಲಿ ಕಾಣುವವರಾಗಿದ್ದರು.
- ☛ ಮೂರನೆಯದಾಗಿ ಅವರಿಗೆ ಅರ್ಹಂತ ಪ್ರಾಪ್ತಿಯ ಆಳವಾದ ತೀಕ್ಷ್ಣ ಪ್ರಜ್ಞಾಶೀಲತೆಯಿತ್ತು.

ಅವರ ಅಷ್ಠಾಂಗ ಅಭಿಜ್ಞಾವು ಹೀಗಿದೆ. ಅಸಾಧಾರಣವಾದ ಅತೀಂದ್ರಿಯ ಪವಾಡಗಳನ್ನು ಮಾಡುವ ಶಕ್ತಿಯಿತ್ತು. ದಿವ್ಯ ಶ್ರೋತ-ಪರರ ಯೋಚನೆಗಳನ್ನು ಓದುವ ಸಾಮರ್ಥ್ಯ, ದಿವ್ಯಚಕ್ಷು ಮತ್ತು ಪರಮಶಾಂತತೆಯ ಪವಿತ್ರ ಜೀವನದ ಪರಮಜ್ಞಾನ.

'ಚರಣ' ಎಂಬ ಪದವು ಸುಚಾರಿತ್ರ್ಯಕ್ಕೆ ಸಂಬಂಧಿಸಿದೆ. ಈ ಚರಣವು 15 ರೀತಿಯಲ್ಲಿ ವಿಭಾಗವಾಗಿದೆ. ಅವು ಬುದ್ಧರಲ್ಲಿ ಯಾವಾಗಲು ವಿದ್ಯಮಾನವಾಗಿರುತ್ತದೆ. ಅವೆಂದರೆ ಕಾಯದಲ್ಲಿ ಮತ್ತು ವಾಚಾದಲ್ಲಿ ಸಂಯಮ, ಇಂದ್ರೀಯ ಗ್ರಹಿಕೆಗಳಲ್ಲಿ ಸಂಯಮ, ಮಿತಾಹಾರ, ಅಲ್ಪನಿದ್ದೆ, ಸ್ಪಷ್ಟವಾದ ದರ್ಶನದ ಶ್ರದ್ಧಾ ನಿರ್ವಹಣೆ, ಪಾಪಲಜ್ಜೆ, ಪಾಪಭಯ, ಜ್ಞಾನದದಾಹ, ಪ್ರಯತ್ನಶೀಲತೆ, ಜಾಗರೂಕತೆ ಮತ್ತು ಪ್ರಜ್ಞಾಶೀಲತೆ. ಹಾಗೆಯೇ ಪ್ರಜ್ಞಾ ಮತ್ತು ಕರುಣೆಯು ಮೂಲ ಅವಳಿಗಳಾಗಿವೆ. ಈ ಮಹೋನ್ನತ



ಕರುಣೆಯಿಂದ ಅವರು ಮಾನವತೆಗೆ ಸೇವೆ ಮಾಡಿದರು. ಅವರು ಪ್ರಜ್ಞಾದಿಂದ ಜೀವಿಗಳಿಗೆ ಏನು ಒಳಿತು ಮತ್ತು ಏನು ಒಳಿತಲ್ಲ ಎಂಬುದನ್ನು ಅರಿತರು ಮತ್ತು ತಮ್ಮ ಕರುಣೆಯಿಂದ ಅವರು ತಮ್ಮ ಹಿಂಬಾಲಕರನ್ನು ಪಾಪದಿಂದ ಮತ್ತು ದುಃಖದಿಂದ ದೂರವಿಟ್ಟರು. ಈ ಪರಮೋನ್ನತ ಗುಣಗಳಿಂದಾಗಿ ಬುದ್ಧರಿಗೆ ವಿಜ್ಜಾಚರಣ ಸಂಪನ್ನರೆನ್ನುತ್ತಾರೆ.

**4. ಸುಗತೋ :** ಬುದ್ಧರನ್ನು ಸುಗತರು ಎನ್ನುತ್ತಾರೆ. ಅದರ ಅರ್ಥ ಏನೆಂದರೆ ಅವರ ಹಾದಿಯು ಶ್ರೇಷ್ಠವೆಂದು, ಅವರ ಗುರಿಯು ಪರಮಶ್ರೇಷ್ಠವೆಂದು ಮತ್ತು ಅವರ ಮಾತುಗಳು ಮತ್ತು ವಿಧಾನಗಳು ಕಲೆರಹಿತ ಹಾಗು ಹಿಂಸೆರಹಿತವಾದುದೆಂದು, ಬುದ್ಧರ ಪರಮಸುಖ ಪ್ರಾಪ್ತಿಯ ಪಥವು ಪರಿಶುದ್ಧವಾದುದು ಹಾಗು ಸರಿಯಾದುದೆಂದು, ವಕ್ರತೆಯಿಲ್ಲದುದು, ನೇರವಾದುದು ಮತ್ತು ಸತ್ಯವಾದುದೆಂದು ತೋರಿಸುತ್ತದೆ.

ಅವರ ವಚನವು ಪರಮ ಉದಾತ್ತವಾದುದು ಮತ್ತು ಅಜೇಯವಾದುದು. ಬಹಳಷ್ಟು ಪ್ರಖ್ಯಾತ ಇತಿಹಾಸಕಾರರು ಮತ್ತು ಶ್ರೇಷ್ಠ ವಿಜ್ಞಾನಿಗಳು ಸಹಾ ಬುದ್ಧವಚನವನ್ನು ಅನುಮೋದಿಸಿದ್ದಾರೆ. ಏಕೆಂದರೆ ಮುಕ್ತ ಚಿಂತನಾಕಾರರು ಮತ್ತು ವಿಜ್ಞಾನಿಗಳು ಸಹಾ ಬುದ್ಧ ಶಾಸನಕ್ಕೆ ಸವಾಲು ಹಾಕಲಾರರು.

**5. ಲೋಕವಿದೂ :** ಬುದ್ಧರಿಗೆ ಲೋಕವಿದೂ ಎಂಬ ಪದ ಏಕೆ ಅನ್ವಯಿಸುತ್ತದೆ ಎಂದರೆ ಅವರು ಅಸಾಮಾನ್ಯವಾದ ಲೋಕಗಳ ಜ್ಞಾನವನ್ನು ಹೊಂದಿದ್ದರು ಬುದ್ಧ ಭಗವಾನರು, ಅನುಭವಿಸಿದ್ದರು ಮತ್ತು ಎಲ್ಲಾ ಬಗೆಯ ಪ್ರಾಪಂಚಿಕ ಜೀವಗಳನ್ನು ಆಳವಾಗಿ ಅರಿತಿದ್ದರು. ಇಡೀ ಬ್ರಹ್ಮಾಂಡದಲ್ಲಿ ಸಾವಿರಗಟ್ಟಲೇ ವಿಶ್ವಗಳಿವೆ ಎಂದು ಹೇಳಿರುವವರಲ್ಲಿ ಅವರು ಮೊದಲಿಗರಾಗಿದ್ದರು. ಹಾಗೆಯೇ ಇಡೀ ಜಗತ್ತು ಕಲ್ಪನೆಯಲ್ಲದೆ ಮತ್ತೇನಿಲ್ಲ ಎಂದು ಪರಮಾರ್ಥವಾಗಿ ಹೇಳಿದವರಲ್ಲಿ ಮೊದಲಿಗರಾಗಿದ್ದಾರೆ. ಅವರು ಲೋಕದ ಆದಿ ಮತ್ತು ಅಂತ್ಯಗಳನ್ನು ಚರ್ಚಿಸುವುದರಲ್ಲಿ ಅರ್ಥವಿಲ್ಲ ಎಂದು

ಹೇಳಿದ್ದಾರೆ. ಅವರ ವಾಸ್ತವಿಕ ದೃಷ್ಟಿಕೋನದಿಂದ ನೋಡುವುದಾದರೆ ಮಾನವನ ಶರೀರದಲ್ಲೇ, ಅದರೊಂದಿಗಿರುವ ಗ್ರಹಿಕೆ, ಅರಿವು, ವೇದನೆ, ಸಂಖಾರಗಳಲ್ಲೆ ಇಡೀ ಲೋಕದ ಉದಯ, ನಿರೋಧ ಮತ್ತು ನಿರೋಧದ ಮಾರ್ಗವನ್ನು ಅರಿಯಬಹುದು.

6. **ಅನುತ್ತರೊ ಪುರಿಸ ದಮ್ಮ ಸಾರಥಿ :** ಅನುತ್ತರೋ ಅಂದರೆ ಅಸಮಾನರು, ಹೋಲಿಕೆಗೆ ನಿಲುಕದವರು, ಸರ್ವ ಉತ್ಕೃಷ್ಟರು ಎಂದರ್ಥ. ಪುರಿ ಸದಮ್ಮ– ಎಂದರೆ ವ್ಯಕ್ತಿಗಳನ್ನು ದಮಿಸುವುದು, ಅಥವಾ ಧಮ್ಮವನ್ನು ನೀಡುವುದು. ಸಾರಥಿ ಎಂದರೆ ನಾಯಕ ಎಂದರ್ಥ. ಈ 3 ಪದಗಳು ಒಟ್ಟಾರೆ ನೋಡಿದರೆ, ಸತ್ಯತೆಯ ಪಥಕ್ಕೆ ದಡ್ಡ ಜನರನ್ನು ತರುವ ಅಸಾಮಾನ್ಯ ನಾಯಕರು ಎಂದರ್ಥ. ಅವರಲ್ಲಿ ಬಹಳಷ್ಟು ಜನರು, ಪಾಪವನ್ನು ವಿಸರ್ಜಿಸಿ ಧರ್ಮದ ಪಥದಲ್ಲಿ ದೃಢವಾಗಿ ನಡೆದುಹೋಗುತ್ತಾರೆ. ಉದಾಹರಿಸುವುದಾದರೆ, ಅಂಗುಲಿಮಾಲಾ, ಅಳವಕ, ನಾಲಾಗಿರಿ, ನೂರಾರು ಡಕಾಯಿತರು, ನರಭಕ್ಷಕರು ಮತ್ತು ಸಚ್ಚಕನಂತಹ ಅವಿಧೇಯಕರು, ಇವರೆಲ್ಲರೂ ಬುದ್ಧರ ಧಮ್ಮದಿಂದ ದಮಿಸಲ್ಪಟ್ಟವರು. ಕೆಲವರಂತು ಅದೇ ಜನ್ಮದಲ್ಲಿ ಅರಹಂತದ (ಸಂತತ್ವದ) ಪದವಿ ಹೊಂದಿದರು. ದೇವದತ್ತ ಬುದ್ಧರಿಗೆ ಪ್ರಧಾನ ವೈರಿಯಂತಿದ್ದವನು ಸಹಾ ಬುದ್ಧರ ಕರುಣೆಗೆ ಪಾತ್ರನಾಗಿದ್ದನು.

7. **ಸತ್ಥಾ ದೇವ–ಮನುಸ್ಸಾನಾಂ :**

ಈ ಪದದ ಅರ್ಥವೇನೆಂದರೆ ಬುದ್ಧರು ದೇವತೆಗಳಿಗೆ ಮತ್ತು ಮನುಷ್ಯರಿಗೆ ಗುರುಗಳಾಗಿದ್ದರು. ಇಲ್ಲಿ ದೇವ ಎಂಬ ಪದದ ಅರ್ಥವೇನೆಂದರೆ, ಮಾನವರು ತಮ್ಮ ಅಪಾರ ಪುಣ್ಯಬಲದಿಂದ ಜೈವಿಕ ವಿಕಾಸ ಹೊಂದಿ ಜನಿಸಿದ ಜೀವಿಗಳ ಹೊರತು, ಪುರಾಣಗಳಲ್ಲಿ ಬರುವಂತಹ ದಂತಕಥೆಯಲ್ಲ. ಬುದ್ಧರು ಮಾನವರ ಮತ್ತು ದೇವತೆಗಳ ವಿವಿಧ ಮಾನಸಿಕ ಪ್ರವೃತ್ತಿ ಮತ್ತು ನೈತಿಕತೆಬಲಗಳನ್ನು ಗುರುತಿಸಿ, ಅವರಿಗೆ ಅನ್ವಯವಾಗುವಂತಹ,



ಅವರಿಗೆ ಬಾಗುವಂತಹ, ಅರ್ಹವಾದ ವಿಧಾನಗಳನ್ನು ನೀಡುವಂತಹ ಗಮನಾರ್ಹವಾದ ಗುರುವಾಗಿದ್ದಾರೆ.

8. **ಬುದ್ಧೋ :** ಬುದ್ಧೋ ಎಂಬ ವಿಶಿಷ್ಟ ವರ್ಣನೆಯು ಇಲ್ಲಿ ಎರಡನೆಯ ಬಾರಿಗೆ ಬಂದಿದೆ. ಆದರೂ ಇದಕ್ಕೆ ವಿಶೇಷ ಒಳಾರ್ಥವಿದೆ. ಬುದ್ಧೊ ಪದಕ್ಕೆ ಅರ್ಥ ಏನೆಂದರೆ ಪ್ರಾವೀಣ್ಯತೆ ಪಡೆದ ಗುರುಗಳು, ಸರ್ವಜ್ಞರಾಗಿದ್ದಾರೆ, ಅಸಮಾನ್ಯ ಬಲಧಾರಿಗಳಾಗಿದ್ದಾರೆ, ತಮ್ಮ ಅಸಮಾನ ಬೋಧನ ಶೈಲಿಯಿಂದ ತಾವು ಸಂಶೋಧಿಸಿದಂತಹ ಧಮ್ಮವನ್ನು ಸರ್ವರಿಗೂ ಅರಿವಾಗುವಂತೆ ಬೋಧಿಸುತ್ತಾರೆ. ಅವರ ವಿಧಾನಗಳು ಬೇರೆ ಯಾವುದೇ ಗುರುವಿಗಿಂತ ಎಲ್ಲಾ ರೀತಿಯಲ್ಲೂ ಮೀರಿದೆ. ಈ ಪದದ ಇನ್ನೊಂದು ಅರ್ಥವೇನೆಂದರೆ 'ಜಾಗೃತೆ ಹೊಂದಿದವರು'. ಏಕೆಂದರೆ ಸಾಧಾರಣ ಜನರು ಮೋಹದ ನಿದ್ದೆಯಲ್ಲಿ ನಿರಂತರ ಇರುತ್ತಾರೆ. ಆದರೆ ಭಗವಾನರು ಈ ಮೋಹನಿದ್ದೆಯಿಂದ ಪ್ರಥಮವಾಗಿ ನಿತ್ಯ ಜಾಗೃತರಾದವರು. ಹಾಗೆಯೇ ಪರರನ್ನು ಜಾಗೃತಿ ಉಂಟುಮಾಡಿದವರು, ಸರ್ವರನ್ನು ಸಂಸಾರದ ನಿದ್ದೆಯಿಂದ ಎಚ್ಚರಿಸಿ ಸ್ಪಷ್ಟ (ಜ್ಞಾನದ, ನಿಬ್ಬಾಣದ) ಜಾಗೃತಿ ಉಂಟುಮಾಡಿದವರು ಆಗಿದ್ದಾರೆ.

9. **ಭಗವಾ :** ಬುದ್ಧರನ್ನು ವಿವರಿಸುವಾಗ ಬುದ್ದೊ ಮತ್ತು ಭಗವಾ ಎಂದು ಬೇರೆ ಬೇರೆಯಾಗಿಯು ಅಥವಾ 'ಬುದ್ಧೋ ಭಗವಾ' (ಬುದ್ಧಭಗವಾನರು) ಎಂದು ಜೊತೆಯಾಗಿಯು ಬಳಸುತ್ತಾರೆ. ಭಗವಾ ಅಥವಾ ಭಗವಾನರು ಎಂದು ಅತ್ಯಂತ ಜನಪ್ರಿಯವಾಗಿ ಮತ್ತು ಸಾಮಾನ್ಯವಾಗಿ ಬಳಸುತ್ತಿದ್ದರು.

ಶ್ರದ್ಧೆ, ಭಕ್ತಿ, ಗೌರವ, ಪೂಜೆಗಳಿಗೆ ಅರ್ಹರಾದ್ದರಿಂದ ಅವರನ್ನು ಭಗವಾ ಎನ್ನುತ್ತಾರೆ. ಭಗವಾ ಎಂಬ ಪದಕ್ಕೆ ಹಲವಾರು ವ್ಯಾಖ್ಯಾನಕಾರರು ವಿವಿಧರೀತಿಯಲ್ಲಿ ವಿವರಿಸುತ್ತಾರೆ. ಅವರನ್ನು ಭಗವಾ ಅಥವಾ "ಶುದ್ದವನ್ನು ಉಂಟು ಮಾಡುವವರು" ಎನ್ನುತ್ತಾರೆ. ಏಕೆಂದರೆ ಅವರು ಮಾನವರಲ್ಲಿ

ಅತ್ಯಂತ ಪುಣ್ಯಶಾಲಿ ಹಾಗು ಪರಮಸುಖಿಯಾಗಿದ್ದಂತಹವರು. ಅವರು ಪಾಪ– ಧಮ್ಮವನ್ನೆಲ್ಲಾ ಜಯಿಸಿದ್ದರು. ಹಾಗು ಶ್ರೇಷ್ಠವಾದ ಧಮ್ಮವನ್ನು ಪ್ರವರ್ತಿಸಿದ್ದರು ಮತ್ತು ಅಸಾಮಾನ್ಯ, ಅತಿಮಾನಸ, ಅತೀಂದ್ರಿಯ ಪ್ರಾಜ್ಞಾಶೀಲತೆಯನ್ನು ಹೊಂದಿದ್ದರು.

ಈ ರೀತಿಯ 7 ಸದ್ಗುಣಗಳ ಧ್ಯಾನವು ಮಹಾ ಫಲಕಾರಿ ನೀಡುತ್ತದೆ. ಸಾಧಕರು ಪ್ರತಿ ಸದ್ಗುಣದ ನಿಜ ಅರ್ಥವನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸಾರವನ್ನು ಹೀರಿ, ಸಮಾಧಿಸ್ಥರಾಗುತ್ತಾರೆ. ಕೇವಲ ಭಕ್ತಿಪೂರ್ವಕ, ಅಥವಾ ಪಠನೆ ಅಷ್ಟು ಫಲಕಾರಿಯಾಗಿರುವುದಿಲ್ಲ. ಅತ್ಯುತ್ತಮ ವಿಧಾನವೆಂದರೆ ನಿರಂತರ ಪಠಿಸುವುದು ಹಾಗೆಯೇ ಅದೇ ವೇಳೆಯಲ್ಲಿ, ಪೂರ್ಣ ಅರ್ಥವನ್ನು ಗ್ರಹಿಸುವುದು. ಈ ರೀತಿ ಮಾಡುವಾಗ ಒಬ್ಬನು ಈ ಅಸಮಾನ್ಯ ಸದ್ಗುಣದಲ್ಲಿ ಆನಂದಿತವಾಗಿ ಸಮಾಧಿಸ್ಥನಾಗಿ ಬುದ್ಧರ ಆ ಸದ್ಗುಣಗಳನ್ನು ಅನುಕರಿಸುತ್ತಾನೆ.



# ಧಮ್ಮದ ಪವಿತ್ರ ಗುಣಗಳು

ಬುದ್ಧರ ಬೋಧನೆಗಳನ್ನು ಸಮಾನ್ಯವಾಗಿ ಧಮ್ಮ ಎನ್ನುತ್ತೇವೆ. ಅಥವಾ ಧರ್ಮ ಎನ್ನುತ್ತೇವೆ. ಇದು ದೇವವಾಣಿಯಲ್ಲ ಅಥವಾ ಊಹಾಪೋಹದ ದಂತಕಥೆಯಲ್ಲ. ಅಥವಾ ದೈವಜ್ಞಾನದ ತಿರುವುಗಳಲ್ಲ. ಇದು ಬ್ರಹ್ಮಾಂಡದ ಸನಾತನ, ನಿತ್ಯ, ಕಾಲಾತೀತ ಸತ್ಯವಾಗಿದೆ ಮತ್ತು ಇದು ಮಹೋನ್ನತ ಜ್ಞಾನೋದಯ ಪಡೆದ ಧಮ್ಮ ಗುರುಗಳ ಅದ್ವಿತೀಯ ಸಂಶೋಧನೆಯಾಗಿದೆ. ಹಾಗಿದ್ದರೂ ಗೌತಮ ಬುದ್ಧರು ಈ ಮಹಾಸತ್ಯಗಳನ್ನು ಸಾಕ್ಷಾತ್ಕರಿಸಿದರು ಮತ್ತು ಜಗತ್ತಿಗೆ ಇದರ ಸಂದೇಶಗಳನ್ನು ಸಾರಿದರು. ಇದನ್ನು ಸಾಧಾರಣ ಮನುಷ್ಯರು ಅರ್ಥ ಮಾಡದೆ ಇರುವುದು ಆಶ್ಚರ್ಯವಿಲ್ಲ. ಏಕೆಂದರೆ ಅವರ ಮನಸ್ಸುಗಳು ಭ್ರಮೆಯ ಮೋಡಗಳಿಂದ ಆವೃತವಾಗಿರುತ್ತದೆ.

ಧಮ್ಮಕ್ಕೆ ಹಲವಾರು ಸದ್ಗುಣಗಳಿವೆ. ಅದರಿಂದಾಗಿ ಅದು ಶ್ರೇಷ್ಠವಾಗಿದೆ ಮತ್ತು ಪರಿಪೂರ್ಣವಾಗಿದೆ. ಹಾಗಿದ್ದರೂ ಧಮ್ಮದ ಮೂರು ನೋಟಗಳಿವೆ. ಅದನ್ನು ಅರಿಯಲೇಬೇಕಾಗಿದೆ.  ಮೊದಲನೆಯದಾಗಿ ಇದೊಂದು ತತ್ವ (ಸಿದ್ಧಾಂತ)ವಾಗಿದ್ದು ಅದರ ಮೂಲ ನಿರ್ಮಲ ರೂಪದಲ್ಲೇ ಕಲಿಯ ಬೇಕಾಗಿದೆ. ಎರಡನೆಯದಾಗಿ ಬುದ್ಧರ ತತ್ವಕ್ಕೆ ಅನುಸಾರವಾಗಿ, ನಿಷ್ಠತೆಯಿಂದ ಶೀಲಗಳನ್ನು ಪಾಲಿಸುವುದು ಅಂದರೆ ಯಾವ ಪಾಪವನ್ನು ಮಾಡದೆ, ಎಲ್ಲಾರೀತಿಯ ಒಳ್ಳೆಯದನ್ನು ಮಾಡುವುದು ಮತ್ತು ಚಿತ್ತವನ್ನು ಪರಿಶುದ್ಧಗೊಳಿಸುವುದು. ಮೂರನೆಯದಾಗಿ ಪ್ರಜ್ಞಾವನ್ನು ವೃದ್ಧಿಸುವುದು ಮತ್ತು ಎಲ್ಲಾ ಆಗುಹೋಗುವಿಕೆಗಳ ಸತ್ಯತೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದು.

ಧಮ್ಮಕ್ಕೆ ಹಲವಾರು ಮಹೋನ್ನತ ಗುಣಗಳಿದ್ದರೂ ತಿಪಿಟಕ ಗ್ರಂಥಗಳಲ್ಲಿ ಆರು ಪ್ರಧಾನ ಲಕ್ಷಣಗಳನ್ನು ವಿವರಿಸಿದೆ. ಈ 6 ಮಹಾನ್ ಲಕ್ಷಣಗಳನ್ನು ಬೌದ್ಧರು ನಿತ್ಯವೂ ತಮ್ಮ ಪೂಜೆಯ ವೇಳೆ ಪಠಿಸುತ್ತಾರೆ. ಅದು ಹೀಗಿದೆ :

**"ಸ್ವಾಖ್ಯಾತೋ ಭಗವತಾ ಧಮ್ಮೋ**
**ಸಂದಿಟ್ಠಿಕೋ, ಅಕಾಲಿಕೊ, ಏಹಿಪಸ್ಸಿಕೊ,**
**ಒಪನಯಿಕೋ ಪಚ್ಚತ್ತಂ**
**ವೇದಿತಬ್ಬೋ ವಿಞ್ಞೂಹಿ"**

**1. ಸ್ವಾಖ್ಯಾತೋ ಭಗವತಾ ಧಮ್ಮೋ :**

ಈ ಪದದ ಅರ್ಥವೇನೆಂದರೆ ಧಮ್ಮವು ಬುದ್ಧರಿಂದ ಸಂಶೋಧಿಸಲ್ಪಟ್ಟು, ತುಂಬ ಚೆನ್ನಾಗಿ ವಿವರಿಸಲ್ಪಟ್ಟಿದೆ. ಇದು ಬೋಧನೆಯ 3 ನೋಟಗಳಲ್ಲಿ ಸಾಮಾನ್ಯ ಸದ್ಗುಣವೆಂದು ಪರಿಗಣಿಸಲ್ಪಡುತ್ತದೆ. ಹೇಳುವುದಾದರೆ ತತ್ವ (ಬೋಧನೆ), ನಿಷ್ಠಾಯುತ ಸಾಧನೆ ಮತ್ತು ಪೂರ್ಣ ಸಾಕ್ಷಾತ್ಕಾರ, ಮಿಕ್ಕ ಪದಗಳು ಲೋಕೋತ್ತರಕ್ಕೆ ಸಂಬಂಧಿಸಿದೆ. ಅವು 8 ಹಂತಗಳಿಂದ ಕೂಡಿದ್ದು ಮತ್ತು ನಿಬ್ಬಾಣವನ್ನು ಒಳಗೊಂಡಿದೆ. ಇದೇ ಬೌದ್ಧಧಮ್ಮದ ಸಾರವಾಗಿದೆ.

ಧಮ್ಮವು ಬುದ್ಧರಿಂದ ಚೆನ್ನಾಗಿ ವಿವರಿಸಲ್ಪಟ್ಟಿದೆ. ಇದು ಆರಂಭದಲ್ಲಿ ಕಲ್ಯಾಣಕಾರಿ, ಮಧ್ಯದಲ್ಲಿ ಕಲ್ಯಾಣಕಾರಿ ಮತ್ತು ಅಂತ್ಯದಲ್ಲಿ ಕಲ್ಯಾಣಕಾರಿಯಾಗಿದೆ. ಇದು ಯಾವುದೇ ರೀತಿಯ ವಿರೋಧತೆ ಹೊಂದಿಲ್ಲ ಮತ್ತು ಇಲ್ಲದ್ದನ್ನು ಸೇರಿಸಿಲ್ಲ ಮತ್ತು ಇದು ನೇರ ಪಥದಿಂದ ಪಕ್ಕಕ್ಕೆ ಚಲಿಸುವುದಿಲ್ಲ. ಹೇಗೆ ಸಾಗರದ ನೀರಿನ ಹನಿಯು ಒಂದೇ ರುಚಿಯನ್ನು ಹೊಂದಿದೆಯೋ ಅದೇರೀತಿ ಧಮ್ಮವು ಒಂದೇ ಒಂದು ರುಚಿಯನ್ನು ಸಾರ್ವಕಾಲಕ್ಕೂ ಹೊಂದಿರುತ್ತದೆ. ಅದೇ ನಿಬ್ಬಾಣ ಸುಖದ ರುಚಿ. ಧಮ್ಮವು ಅಕ್ಷರ ಮತ್ತು ಅರ್ಥಗಳೆರಡರಲ್ಲೂ ಅಪ್ಪಟತೆಯನ್ನು ಹೊಂದಿದೆ. ಧಮ್ಮದ



ವಿಷಯವು ಶೀಲದಿಂದ ಆರಂಭವಾಗುತ್ತದೆ. ಅಂದರೆ ಸದಾಚಾರ, ಅದರ ಮೇಲೆ ಪ್ರಶಾಂತತೆಯ ಸಮಾಧಿಯು ಸ್ಥಾಪಿತವಾಗುತ್ತದೆ. ನಂತರ ಪ್ರಜ್ಞಾವು ಹಿಂಬಾಲಿಸಿ ದೃಢವಾಗಿ ಪ್ರತಿಷ್ಠಿತವಾಗುತ್ತದೆ.

ಧಮ್ಮದ ಜ್ಞಾನವನ್ನು ಗಳಿಸುವುದು ಹೇಗೆಂದರೆ ಧಮ್ಮದ ಪ್ರವಚನ ಕೇಳುವುದರಿಂದ ಹಾಗೂ ಓದುವುದರಿಂದ ಮತ್ತು ಅರ್ಥಮಾಡಿ ಕೊಳ್ಳುವುದರಿಂದ, ನಂತರ ಸರಿಯಾದ ವಿಧಾನಗಳನ್ನು ಅರಿಯುವುದು ಅದರ ಪ್ರಾಯೋಗಿಕ ಸಾಧನೆಯಿಂದಲೇ. ನಿರಂತರ ಸಾಧನೆಯಿಂದ ನಾವು ಮಾನಸಿಕ ಕ್ಲೇಶಗಳನ್ನು ದಾಟಬಹುದು, ಅದರ ಪರಿಣಾಮವಾಗಿ, ಮನಸ್ಸು ಶಾಂತವಾಗುತ್ತದೆ, ಪ್ರಶಾಂತವಾಗುತ್ತದೆ. ಅಂತಹ ಮಾನಸಿಕ ಸ್ಥಿತಿಯ ಶ್ರೇಷ್ಠಜ್ಞಾನ ಪ್ರಾಪ್ತಿ ಮಾಡಲು ಸಹಾಯಕವಾಗಿರುತ್ತದೆ. ಅದನ್ನು 'ವಿಪಶ್ಯನ' ಎನ್ನುವೆವು. ಯಾವಾಗ ಈ ಅಂತರ್ ಜ್ಞಾನವನ್ನು ಬೆಳವಣಿಗೆಯನ್ನು ಸ್ಥಿರವಾಗಿ ವೃದ್ಧಿಸಿವೆವೋ, ಆಗ ಜೀವನದಲ್ಲಿ ಒಮ್ಮೆ ಸಿಗುವಂತಹ ಪರಮೋಚ್ಚ ಪ್ರಜ್ಞೆಯು ಪ್ರಾಪ್ತಿ ಆಗುತ್ತದೆ.

ಜಗತ್ತಿನ ಮತ್ತು ಜೀವಿಯ ಬಗ್ಗೆ ಬುದ್ಧರ ವಿವರವೇನೆಂದರೆ ಅವೆಲ್ಲವೂ ಮಾನವನ ಯೋಚನೆಯಲ್ಲಿ ಅಡಕವಾಗಿದೆ. ಅವರ ಸಂಶೋಧನೆ, ವಿಚಾರತೆ, ವಿಶ್ಲೇಷಣೆ, ವಿಮರ್ಶೆಯು ಸಂಪ್ರದಾಯಗಳಿಂದ ಮತ್ತು ಪುರಾಣಗಳಿಂದ ಭಿನ್ನವಾಗಿತ್ತು. ಬುದ್ಧರು ಧಮ್ಮದ ತಿರುಳಿನಲ್ಲಿ ಆಳವಾಗಿ ಅಭ್ಯಸಿಸಿ ಜಗತ್ತಿನ ಎಲ್ಲಾ ಆಗುಹೋಗುವಿಕೆಗಳ ನೈಜತೆಯನ್ನು ಅರಿತರು. ಆ ಜ್ಞಾನದಿಂದ ಸರ್ವಾಧಿಕಾರತ್ವ ಹೊಂದದೆ, ಪಕ್ಷಪಾತವನ್ನು ಹೊಂದದೆ, ಅವರು ಧಮ್ಮವನ್ನು ಬೋಧಿಸಿದರು. ಅವು ಪಾಲಿಸಲು ಸರ್ವ ಯೋಗ್ಯವಾಗಿದೆ.

ಧಮ್ಮವು ಸರ್ವಶಕ್ತತೆಯ ಹೆಸರಿನಲ್ಲಿ ವಿಧೇಯತೆಯ ಋಣವನ್ನು ಅಪೇಕ್ಷಿಸಲಿಲ್ಲ. ಆದರೆ ಇದು ವ್ಯಕ್ತಿಗತ ಸ್ವಾತಂತ್ರವುಳ್ಳದಾಗಿದೆ. ಅಂದರೆ

ಮಾನವನಿಂದ, ಮಾನವನಿಗೆ ಸ್ವತಂತ್ರವಿದ್ದು ಒಬ್ಬ ವ್ಯಕ್ತಿ ತಾನು ಸ್ವತಂತ್ರವಾಗಿ ಚಿಂತಿಸಿ ತನ್ನಿಂದಲೇ ಮುಕ್ತನಾಗಬಲ್ಲ ಅದಕ್ಕಾಗಿ ಬೇರೆ ಬಾಹ್ಯ ಸಹಾಯ ಬೇಕಾಗಿರುವುದಿಲ್ಲ. ಧಮ್ಮವು ಸಾರ್ವತಿಕವಾಗಿದೆ ಮತ್ತು ಮಾನವತೆಯ ಮೇಲೆ ಪ್ರಬಲ ಆಸಕ್ತಿ ಹೊಂದಿದ್ದು, ವಿಶ್ವದ ಎಲ್ಲೆಡೆ ಯಾರು ಬೇಕಾದರೂ ಯಾವಾಗಲಾದರೂ ಪಾಲಿಸಬಹುದಾಗಿದೆ.

ಈ ರೀತಿಯಾಗಿ ಬುದ್ಧರು ತಮ್ಮ ವಿಚಾರಶೀಲತೆ ಮತ್ತು ವೈಜ್ಞಾನಿಕ ದೃಷ್ಟಿಕೋನದಿಂದ ಎಲ್ಲಾ ತಾತ್ವಿಕ ಪದಗಳ ಅರ್ಥವನ್ನೇ ಬದಲಾಯಿಸಿದರು. ಉದಾಹರಣೆಗೆ ಕರ್ಮವು ಬುದ್ಧರ ಬರುವಿಕೆಯ ಮೊದಲು ಅದರ ಅರ್ಥ ವಿಧಿ ಕ್ರಿಯೆ ಆಗಿತ್ತು. ಆದರೆ ಬುದ್ಧರು ಅದಕ್ಕೆ ಹೊಸ ಅರ್ಥವನ್ನು ನೀಡಿದರು ಅದೇ ಇಚ್ಛೆ. ಏಕೆಂದರೆ ಇಚ್ಛೆಯೇ ಕರ್ಮಕ್ಕೆ ಮೂಲವಾಗಿದೆ.

ಈ ಪರಮ ಉದಾತ್ತ ಧಮ್ಮವು ಸಾಮಾಜಿಕ ಅನ್ಯಾಯಗಳನ್ನು ಖಂಡಿಸಿದೆ. ಉದಾಹರಣೆಗೆ ವರ್ಣವ್ಯವಸ್ಥೆ, ಜಾತಿಪದ್ಧತಿ, ಗುಲಾಮಗಿರಿ, ಸ್ತ್ರೀಶೋಷಣೆ, ಇತ್ಯಾದಿ. ಬುದ್ಧರು ಎಂದಿಗೂ ಸರ್ವಾಧಿಕಾರಿಯಂತೆ ವರ್ತಿಸಿಲ್ಲ. ಬದಲಾಗಿ ಧಮ್ಮ ಪ್ರಜಾಪ್ರಭುತ್ವದ ಗುರುವಾಗಿ ಕಾಣಿಸಿದ್ದಾರೆ. ತಿಸರಣದಿಂದ ಪ್ರಾರಂಭವಾಗಿ ನಿಬ್ಬಾಣದ ಪರಮ ಸುಖದ ಪ್ರಾಪ್ತಿಯವರೆಗೆ ಬುದ್ಧಾನುಯಾಯಿಯು ತನ್ನನ್ನು ಕ್ಷೇಮಯುತವಾಗಿ ಕಾಣುತ್ತಾನೆ. ಏಕೆಂದರೆ ಧಮ್ಮದ ರಕ್ಷಣೆ ಮತ್ತು ಸಲಹೆಗಳು ಆತನಿಗೆ ಬುದ್ಧರಿಂದ ಚೆನ್ನಾಗಿ ವಿವರಿಸಲ್ಪಟ್ಟಿದೆ. (ಸ್ವಾಖ್ಯಾತೋ)

**2. ಸಂದಿಟ್ಠಿಕೋ**

ಸಂದಿಟ್ಠಿಕೋ ಪದದ ಅರ್ಥವೇನೆಂದರೆ ನಾವು ಧಮ್ಮವನ್ನು ಚೆನ್ನಾಗಿ ಅಭ್ಯಾಸ ಮಾಡಿದರೆ ಮತ್ತು ಅದನ್ನು ನಿಷ್ಠ ಸಾಧನೆಯಲ್ಲಿ ಅನುಷ್ಠಾನಗೊಳಿಸಿದರೆ ಅದರ ಮಹೋನ್ನತ ಫಲಗಳು ಇಲ್ಲಿಯೇ ಮತ್ತು



ಈಗಲೇ ಕಾಣುತ್ತೇವೆ. ಉದಾಹರಿಸುವುದಾದರೆ, ಅತ್ಯಂತ ನೀಚನಾದ ವ್ಯಕ್ತಿಯೊಬ್ಬ ಸಮಾಜಕ್ಕೆ ಶಾಪವಾಗಿರುತ್ತಾನೆ. ಅಂತಹವನು ಬುದ್ಧರಲ್ಲಿ ಮತ್ತು ಧಮ್ಮದಲ್ಲಿ ಶರಣು ಹೋಗಿ ಹೊಸ ಜೀವನ ಪ್ರಾರಂಭಿಸಿದರೆ ಆತನ ಎಲ್ಲಾ ಸಮಸ್ಯೆಗಳು ಅಂತ್ಯ ಕಾಣುತ್ತದೆ. ಇದಕ್ಕೆ ಉದಾಹರಣೆಗಳು ಸಾಮ್ರಾಟ್ ಅಶೋಕನನ್ನೇ ತೆಗೆದುಕೊಳ್ಳಿ. ಆತನು ಹಿಂದೆ ಕ್ರೂರ ಆಡಳಿತಗಾರನಾಗಿದ್ದ. ಆತನಿಗೆ ಚಂಡ ಅಶೋಕನೆಂಬ ಬಿರುದನ್ನು ಜನರು ನೀಡಿದ್ದರು. ನಂತರ ಆತನು ಬುದ್ಧ ಧಮ್ಮವನ್ನು ಸ್ವೀಕರಿಸಿದುದು ಮತ್ತು ಆಚರಣೆಯಲ್ಲಿ ತಂದಮೇಲೆ ಆತನಿಂದ ಸಮಾಜಕ್ಕೆ ಅಪಾರ ಒಳಿತಾಯಿತು. ಆತನು ಧಮ್ಮಾಶೋಕ ಎಂದು ಇಂದಿಗೂ ಆತನನನ್ನು ಗೌರವಿಸುತ್ತಾರೆ.

**3. ಅಕಾಲಿಕೋ :**

ಅಕಾಲಿಕೋ ಪದವು ಸೂಚಿಸುವುದು ಏನೆಂದರೆ ಧಮ್ಮಪಾಲನೆಯಿಂದ ಲಭಿಸುವ ಮಹತ್ಫಲಗಳು ನಿಧಾನವಾಗುವುದಿಲ್ಲ. ಕಾಲ ವಿಳಂಬವಿಲ್ಲದೆ ಲಭಿಸುತ್ತವೆ. ಧಮ್ಮವು ಘೋಷಣೆಯಾಗಿ ಸಾವಿರಾರು ವರ್ಷಗಳು ಕಳೆದರೂ ಸಹಾ ಇಂದಿಗೂ ಎಂದೆಂದಿಗೂ ಸಹಾ ನವೀನತೆಯನ್ನೇ ಹೊಂದಿದೆ ಹಾಗೂ ಪರರು ಸವಾಲು ಹಾಕದಿರುವಂತಿದೆ. ಈ ಆಧುನಿಕ ವೈಜ್ಞಾನಿಕ ಚಿಂತನೆಯ ಜೊತೆಗೆ ಸಮಾನಂತರವಾಗಿ ಓಡುತ್ತಿದೆ. ನೆನಪಿಡಿ, ಏನಾದರೂ ಸತ್ಯವಿದ್ದರೆ ಅಂತಹ ಸತ್ಯವು ಎಂದಿಗೂ ಹಳೆಯದಾಗದು, ಮುಪ್ಪಾಗದು, ಧಮ್ಮವು ಎಂಥಹ ಸತ್ಯವೆಂದರೆ ಅದು ಎಂದಿಗೂ ಕಾಲದೊಂದಿಗೆ ಮುಪ್ಪಾಗದು.

ಏಕೆಂದರೆ ಅದು ಸಂಸಾರದಲ್ಲಿರುವ ಪ್ರತಿಯೊಂದು ಆಗುಹೋಗುಗಳ ವಾಸ್ತವಿಕ ನೈಜತೆಗಳನ್ನು ಹಾಗೇ ತೋರಿಸುತ್ತದೆ. ಸಂಕ್ಷಿಪ್ತವಾಗಿ ಧಮ್ಮವು ಹೇಳುವುದು ಏನೆಂದರೆ ಜಗತ್ತು ಅತೃಪ್ತಿಯಿಂದ (ದುಃಖ) ಕೂಡಿದೆ ಮತ್ತು

ಈ ಸ್ಥಿತಿಗಳಿಗೆಲ್ಲಾ ಕಾರಣ ತೃಷ್ಣೆಯಾಗಿದೆ. ಈ ಅತೃಪ್ತಿಯನ್ನು (ದುಃಖವನ್ನು) ಇಲ್ಲದಾಗಿಸಬೇಕೆಂದರೆ ಅಷ್ಠಾಂಗ ಮಾರ್ಗದ ಮಹಾನ್ ಎಂಟು ಕೌಶಲ್ಯಯುತ ಅಂಗಗಳಿಂದ ಸಾಧನೆ ಮಾಡಿ ಲೋಭವನ್ನು ಪೂರ್ಣವಾಗಿ ಮರುಹುಟ್ಟದಂತೆ ತೆಗೆದುಹಾಕುವುದು.

**4. ಏಹಿಪಸ್ಸಿಕೊ :**

ಎಹಿಪಸ್ಸಿಕೊ ಸೂಚಿಸುವುದು ಏನೆಂದರೆ ಪ್ರತಿಯೊಬ್ಬರಿಗೂ ಬನ್ನಿ, ನೋಡಿ, ಪರೀಕ್ಷಿಸಿ, ಶೋಧಿಸಿ ಎಂದು ಮುಕ್ತವಾಗಿ ಆಹ್ವಾನಿಸುತ್ತದೆ. ಧಮ್ಮವನ್ನು ಸ್ವೀಕರಿಸುವ ಮುನ್ನ ವಿಶ್ಲೇಷಿಸಿ, ಏಕೆಂದರೆ ಧಮ್ಮದಲ್ಲಿ ನಿಗೂಢವೆಂಬುದಿಲ್ಲ. ಅಥವಾ ಪುರಾಣಗಳಿಲ್ಲ. ಧಮ್ಮವು ಪರಿಶುದ್ಧವಾಗಿದೆ ಮತ್ತು ಸ್ಪಟಿಕದಂತೆ ಪರಿಶುದ್ಧವಾಗಿ, ಪರಿಶುಭ್ರವಾಗಿ ಸ್ಪಷ್ಟವಾಗಿದೆ. ಇದು ಘನ ಸ್ವರ್ಣದಂತೆ ಪರಿಶುದ್ಧವಾಗಿದೆ. ಬುದ್ಧರೇ ಈ ರೀತಿ ಪ್ರಕಟಪಡಿಸಿದ್ದಾರೆ.

“ನಾನು ಹೇಳುತ್ತಿರುವೆ ಎಂದು ಗೌರವದಿಂದ ಸ್ವೀಕರಿಸದಿರಿ, ಚಿನ್ನದ ಪರಿಶುದ್ಧತೆಯನ್ನು ಹೇಗೆ ಸುಟ್ಟು ಅಥವಾ ಉಜ್ಜಿ ಪರೀಕ್ಷಿಸುವಿರೋ, ಹಾಗೆಯೇ ಧಮ್ಮವನ್ನು ಅತ್ಯಂತ ಹತ್ತಿರದಿಂದ ಶೋಧಿಸಿದ ಬಳಿಕವೇ ಸ್ವೀಕರಿಸಿ”. ಇಂತಹ ನಿರ್ಭಯ ಶೋಧಕ ಘೋಷವು ಬುದ್ಧರ ಮಹೋನ್ನತೆಯನ್ನು ತಿಳಿಸಿ, ಹಾಗೆಯೇ ಮಹೋನ್ನತ ಧಮ್ಮವು ಅವಿಚಲಸತ್ಯವನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ.

**5. ಓಪನಯಿಕೊ :**

ಓಪನಿಯಿಕೊ ಎಂಬ ಪದದ ಅರ್ಥವು ಏನೆಂದರೆ ನಿಷ್ಠಾವಂತ ಧಮ್ಮದ ಅನುಯಾಯಿಯ ಅಷ್ಟಾಂಗ ಮಾರ್ಗದ ಉದ್ದಕ್ಕೂ ನಡೆದಾಗ ನಿಬ್ಬಾಣ (ನಿತ್ಯಶಾಂತಿ ಮತ್ತು ಪರಮಸುಖ) ಪ್ರಾಪ್ತಿಗಳಿಸುತ್ತಾನೆ. ಧಮ್ಮ ಹೇಳುವುದು ಏನೆಂದರೆ ಲೋಕೋತ್ತರ ಧಮ್ಮವು 4 ಹಂತಗಳಿಂದ ಮತ್ತು



ಫಲಗಳಿಂದ ಕೂಡಿದೆ. ಇದು ಸಾಧಿಸಲು ಅರ್ಹವಾದುದು ಮತ್ತು ಹಂತಹಂತದ ಅಭಿವೃದ್ಧಿಯನ್ನು ಹೊಂದಿದೆ. ಧಮ್ಮವು ಸಾಧಕ ಅನುಯಾಯಿಯನ್ನು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಅವರು ಪೂರ್ಣವಾಗಿ ಎಲ್ಲಾ ಬಂಧನಗಳಿಂದ ಮತ್ತು ತಡೆಗಳಿಂದ ಮುಕ್ತರಾಗುವ ವರೆಗೂ ಕರೆದೊಯ್ಯುತ್ತಲೇ ಇರುತ್ತದೆ.

**6. ಪಚ್ಚತ್ತಂ ವೇದಿತಬ್ಬೋ ವಿಞ್ಞೂಹಿ :**

ಈ “ಪಚ್ಚತ್ತಂ ವೇದಿತ್ತಬ್ಬೋ ವಿಞ್ಞೂಹಿ”ಯು ಸೂಚಿಸುವುದು ಏನೆಂದರೆ ಧಮ್ಮವು ಜ್ಞಾನಿಯಾದ ಪ್ರತಿಯೊಬ್ಬರಿಂದಲೂ ಅರ್ಥವಾಗುವಂತಹುದು. ಯಾರೂ ಧಮ್ಮವನ್ನು ಇನ್ನೊಬ್ಬನಿಗಾಗಿ ಅರಿಯಲಾರದು, ಏಕೆಂದರೆ ಬಾಯಾರಿದವನು ನೀರು ಕುಡಿಯಬೇಕೇ ಹೊರತು ಇನ್ನೊಬ್ಬ ವ್ಯಕ್ತಿಯಲ್ಲ. ಬಾಯಾರಿದವನು ನೀರು ಸೇವಿಸಿದರೆ ಅವನ ಬಾಯಾರಿಕೆ ಇಂಗುತ್ತದೆ. ಬೇರೆಯವರು ನಮಗಾಗಿ ನೀರು ಸೇವಿಸಿದರೆ ನಮ್ಮ ಬಾಯಾರಿಕೆ ಇಂಗದು. ಈ ಪದವು ಎರಡು ಗಮನಾರ್ಹ ಅಂಶಗಳನ್ನು ಸೂಚಿಸುತ್ತದೆ. ಮೊದಲನೆಯದಾಗಿ ಸಂಬೋಧಿ ಪ್ರಾಪ್ತಿಯು ವ್ಯಕ್ತಿಗತವಾದುದು ಮತ್ತು ಎರಡನೆಯದಾಗಿ ಧಮ್ಮವು ಕೇವಲ ಜ್ಞಾನಿಗಳಿಂದ ಅರಿಯಲ್ಪಡುತ್ತದೆ ಎಂಬುದು ಗೊತ್ತಾಗುತ್ತದೆ.

ಬುದ್ಧ ಭಗವಾನರು ರಕ್ಷಣೆಯ ಮಾರ್ಗದರ್ಶಕರು ಅಂದರೆ ಪರರಿಗೆ ಮಾರ್ಗದಲ್ಲಿ ಹೋಗಲು ಮಾರ್ಗ ತೋರಿಸುವವರು. ನಂತರ ಶೀಲವನ್ನು ಪಾಲಿಸುವುದು, ಸಮಾಧಿಯನ್ನು ಸಾಧಿಸುವುದು ಮತ್ತು ಪ್ರಜ್ಞಾವನ್ನು ಪ್ರಾಪ್ತಿ ಮಾಡುವುದು ನಮಗೆ ಸಂಬಂಧಪಡುತ್ತದೆ. ಪ್ರಜ್ಞಾವು ಅಂತರ್‌ದೃಷ್ಟಿಯ ಜ್ಞಾನವಾಗಿದ್ದು, ಇದು ವ್ಯಕ್ತಿಗಳನ್ನು ಸಾಮರ್ಥ್ಯಯುತರನ್ನಾಗಿಸಿ ತಮ್ಮ ಪರಿಶ್ರಮದಿಂದ ತಮ್ಮ ವಿಮುಕ್ತಿಗಳಿಸಲು ಸಹಾಯಕವಾಗಿದೆ.